ಕಥಾವನ | ಬೆರಗಿನ ಲೋಕದಲ್ಲೊಂದು ಪಯಣ

Azim Premji University

**ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ | ಕನ್ನಡ ಉಪಕ್ರಮ**

# ಕನ್ನಡದಲ್ಲಿ ಮಕ್ಕಳ ಸಾಹಿತ್ಯಕ್ಕೆ ಕೊಡುಗೆ ನೀಡಲು ಬರಹಗಾರರಿಗೊಂದು ಕರೆ



ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಕನ್ನಡದಲ್ಲಿ ಮಕ್ಕಳ ಸಾಹಿತ್ಯ ರಚನೆಗೆ ಉದಯೋನ್ಮುಖ ಮತ್ತು ಅನುಭವಿ ಬರಹಗಾರರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿದೆ.

## ಏಕೆ ಭಾಗವಹಿಸಬೇಕು?

ಆಯ್ಕೆಪ್ರಕ್ರಿಯೆಯ ಮೂಲಕ ಆಯ್ಕೆಗೊಂಡ ಬರಹಗಾರರು ನಿರ್ದಿಷ್ಟ ಪ್ರಕಾರ ಮತ್ತು ಮಕ್ಕಳ ವಯೋಮಾನಕ್ಕೆ ತಕ್ಕ ಸಾಹಿತ್ಯವನ್ನು ರಚಿಸಲು ತಜ್ಞ ಮಾರ್ಗದರ್ಶಕರಿಂದ ಬೆಂಬಲವನ್ನು ಪಡೆಯಲಿದ್ದಾರೆ. ಅಲ್ಲದೆ ಬರಹಗಾರರು ಈ ಕೆಳಗಿನ ಸೌಲಭ್ಯಗಳನ್ನು ಪಡೆಯುವರು.

- ಉದಯೋನ್ಮುಖ ಹಾಗೂ ಅನುಭವಿ ಸಾಹಿತಿಗಳೊಂದಿಗೆ ಬೆರೆತು ವಿಚಾರ ವಿನಿಮಯ ನಡೆಸುವ ಅವಕಾಶ;
- ಕೃತಿ ಪ್ರಕಟಣೆಯ ಅವಕಾಶ
- ಮೊದಲ ಹಂತದಲ್ಲಿ ಆಯ್ಕೆಯಾದ ಬರಹಗಾರರು ಕಾರ್ಯಾಗಾರದಲ್ಲಿ ಭಾಗವಹಿಸಲು ಪ್ರಯಾಣ ಭತ್ಯೆ ಮತ್ತು ವಸತಿ ವ್ಯವಸ್ಥೆಯನ್ನು ನೀಡಲಾಗುವುದು.

## ಯಾರು ಅರ್ಜಿ ಸಲ್ಲಿಸಬಹುದು?

- ಈಗಾಗಲೇ ಪುಸ್ತಕಗಳನ್ನು ಪ್ರಕಟಿಸಿರುವವರು.
- ಮಕ್ಕಳ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಡಲು ಬಯಸುವ ಉದಯೋನ್ಮುಖ ಬರಹಗಾರರು;
- ಕನ್ನಡದ ಮೂಲ ಬರಹಗಳಿಗೆ ಮಾತ್ರ ಅವಕಾಶ; ಅನುವಾದಿತ ಬರಹಕ್ಕೆ ಅವಕಾಶವಿರುವುದಿಲ್ಲ

## ನೀವೇನು ಬರೆಯಬಹುದು?

ಲೇಖಕರು ಯಾವುದೇ ಸಾಹಿತ್ಯ ಪ್ರಕಾರವನ್ನು ಆಯ್ಕೆ ಮಾಡಿಕೊಳ್ಳಬಹುದು: ಕಥೆ, ಜೀವನ ಚರಿತ್ರೆ, ಪ್ರವಾಸ ಕಥನ, ನಾಟಕ, ಕಾವ್ಯ ಹಾಗೂ ಕಾದಂಬರಿ

ಬರಹಗಾರರು ತಾವು ಉದ್ದೇಶಿಸಿದ ಪ್ರಕಾರ ಹಾಗೂ ತಲಪಲು ಇಚ್ಛಿಸುವ ವಯೋಮಾನದ ಗುಂಪು ಇವುಗಳನ್ನು ಸೂಚಿಸಬೇಕು. ನಿರ್ದಿಷ್ಟವಾಗಿ ಪದಗಳ ಮಿತಿ ಇಲ್ಲವಾದರೂ ಕೃತಿಯ ಗಾತ್ರವು ಆಯ್ಕೆ ಮಾಡಿರುವ ಪ್ರಕಾರ ಹಾಗೂ ಮಕ್ಕಳ ಗುಂಪಿನ ವಯೋಮಿತಿಗೆ ಸೂಕ್ತವಾಗಿ ಇರಬೇಕು.

ನಾವು ಒಳಗೊಳ್ಳುವ (inclusive), ವೈವಿಧ್ಯವನ್ನು ಸಂಭ್ರಮಿಸುವ, ಮಕ್ಕಳನ್ನು ತೊಡಗಿಸಿಕೊಳ್ಳುವ ಸೃಜನಶೀಲ ಹಾಗೂ ಹೊಸತನದಿಂದ ಕೂಡಿದ ನಿರೂಪಣೆಗಳನ್ನೊಳಗೊಂಡ ಬರಹಗಳನ್ನು ಸ್ವಾಗತಿಸುತ್ತೇವೆ.

## ಅರ್ಜಿ ಸಲ್ಲಿಕೆಗೆ ಮಾರ್ಗಸೂಚಿಗಳು

- ಹೆಸರು, ವಿಳಾಸ, ಇ ಮೇಲ್ ಐಡಿ, ದೂರವಾಣಿ ಸಂಖ್ಯೆ, ಬರಹದ ಅನುಭವ (ಇದ್ದಲ್ಲಿ) ಈ ಎಲ್ಲಾ ವಿವರಗಳನ್ನು ನಿಮ್ಮ ಅರ್ಜಿಯು ಒಳಗೊಂಡಿರಲಿ.
- ನಿಮ್ಮ ಆಯ್ಕೆಯ ಸಾಹಿತ್ಯ ಪ್ರಕಾರ ಹಾಗೂ ತಲಪಲಿಚ್ಛಿಸುವ ವಯೋಮಾನದ ಗುಂಪು ಇವುಗಳನ್ನು ನಮೂದಿಸಿ.
- ಪ್ರಕಟಿತ ಅಥವಾ ಅಪ್ರಕಟಿತ ನಿಮ್ಮ ಬರಹದ ಒಂದು ಮಾದರಿಯನ್ನು ಅಥವಾ ನೀವು ಬರೆಯಲಿಚ್ಛಿಸಿರುವ ಕೃತಿಯ, ಗರಿಷ್ಠ ಒಂದು ಸಾವಿರ ಪದಗಳ ಮಿತಿಯಲ್ಲಿ, ಸಾರಾಂಶವನ್ನು ಲಗತ್ತಿಸಿ.
- ಅರ್ಜಿ ಸಲ್ಲಿಸುವ ಮುನ್ನ ವಿವರವಾದ ಪರಿಕಲ್ಪನಾ ಟಿಪ್ಪಣಿ ಮತ್ತು ಮಾರ್ಗಸೂಚಿಗಳನ್ನು ತಪ್ಪದೆ ಓದಿರಿ.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ನವೆಂಬರ್ 30, 2025**

**ಅರ್ಜಿ ಸಲ್ಲಿಸಬೇಕಾದ ಇ-ಮೇಲ್: kannada.makkalasahitya@apu.edu.in**

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:** ದಿನೇಶ್ ಮಡಗಾಂವ್‌ಕರ್- 9844049489

## ಆಯ್ಕೆ ಪ್ರಕ್ರಿಯೆ

ಬರಹಗಾರರ ಆಯ್ಕೆಯು ಅವರು ಸಲ್ಲಿಸಿರುವ ಬರಹದ ಮಾದರಿ ಅಥವಾ ಕೃತಿಯ ಸಾರಾಂಶ ಇವುಗಳ ಗುಣಮಟ್ಟ ಮತ್ತು ಹೊಸತನವನ್ನು ಆಧರಿಸಿರುತ್ತದೆ. ಈ ಪ್ರಕ್ರಿಯೆಯು ಕೆಳಗಿನ ಹಂತಗಳನ್ನು ಒಳಗೊಂಡಿರುತ್ತದೆ.

1. ತಜ್ಞರ ಸಮಿತಿಯಿಂದ ಬರಹದ ಮಾದರಿಗಳ/ವಿಸ್ತೃತ ಸಾರಾಂಶಗಳ ಆರಂಭಿಕ ಪರಿಶೀಲನೆ.
2. ಆಯ್ಕೆಯಾದ ಬರಹಗಾರರಿಗೆ ಅವರ ಪೂರ್ಣ ಕೃತಿಯ ಪೂರ್ಣ ಕರಡನ್ನು ಒಂದು ನಿಗದಿತ ದಿನಾಂಕದೊಳಗೆ ಸಲ್ಲಿಸಲು ತಿಳಿಸಲಾಗುವುದು.
3. ತಜ್ಞರ ಸಮಿತಿಯಿಂದ ಬರಹಗಳ ಆಯ್ಕೆ;
4. ಆಯ್ಕೆಗೊಂಡ ಬರಹಗಾರರು ಮಾರ್ಗದರ್ಶಕ ಕಾರ್ಯಾಗಾರಗಳಲ್ಲಿ ಭಾಗವಹಿಸಿ, ತಮ್ಮ ಬರಹದ ಬಗೆಗೆ ಹಿಮ್ಮಾಹಿತಿಯನ್ನು ಪಡೆದು, ತಮ್ಮ ಕೃತಿಯನ್ನು ಪರಿಷ್ಕರಿಸಿ, ಅಂತಿಮ ಹಸ್ತಪ್ರತಿಯನ್ನು ಸಲ್ಲಿಸಲು ಸೂಚನೆ.
5. ಕೃತಿಗಳ ಕರಡನ್ನು ಪರಿಶೀಲಿಸಿ ತಜ್ಞರ ಅಭಿಪ್ರಾಯದಂತೆ ಅಂತಿಮ ಪ್ರಕಟಣೆಗೆ ಕೆಲವು ಹಸ್ತಪ್ರತಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಗಮನಿಸಿ: ಹಸ್ತಪ್ರತಿಯ ಸಲ್ಲಿಕೆಯು ಪ್ರಕಟಣೆಯನ್ನು ಖಾತ್ರಿಪಡಿಸುವುದಿಲ್ಲ. ಪ್ರಕಟಣೆಯ ಅಂತಿಮ ನಿರ್ಧಾರವನ್ನು ತಜ್ಞರ ಸಮಿತಿಯು ಕೈಗೊಳ್ಳುವುದು. ಅವರ ನಿರ್ಧಾರವೇ ಅಂತಿಮವಾಗಿರುತ್ತದೆ.

## ಗ್ರಂಥಸ್ವಾಮ್ಯ ಮತ್ತು ಹಕ್ಕುಗಳು

- ಪ್ರಕಟಣೆಗೆ ಸಲ್ಲಿಸಲಾದ ಎಲ್ಲಾ ಕೃತಿಗಳ ಮೇಲಿನ ಸಂಪೂರ್ಣ ಗ್ರಂಥಸ್ವಾಮ್ಯ ಹಕ್ಕನ್ನು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವೇ ಹೊಂದಿರುತ್ತದೆ.
- ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಲಿಖಿತ ಅನುಮತಿ ಇಲ್ಲದ ಹೊರತು ಇತರ ಪ್ರಕಾಶನ ಸಂಸ್ಥೆಗಳೊಂದಿಗೆ ಹಸ್ತಪ್ರತಿಯನ್ನು ಹಂಚಿಕೊಳ್ಳುವಂತಿಲ್
- ಈ ಯೋಜನೆಯು ಲಾಭೋದ್ದೇಶಕ್ಕೆ ಹೊರತಾದುದರಿಂದ, ಪ್ರಕಟಿತ ಕೃತಿಗಳಿಗೆ ಯಾವುದೇ ರಾಯಲ್ಟಿಯನ್ನಾಗಲೀ, ಗೌರವಧನವನ್ನಾಗಲೀ ಕೊಡಲಾಗುವುದಿಲ್ಲ.